Have we to simply suppress everything just because the rules do not permit? What more urgency can there be than the one I have mentioned in the adjournment motion? It is unfortunate that the Chief Minister to whom the students presented a memorandum is not here. They have taken to only constitutional methods. There cannot be any more urgency than this matter. We want to know what the views of the Government are. We are seeing ministers going to several functions for inauguration etc. This is the burning problem of the day and I want some time to be allotted for discussing it.

We hear that the gates of the Prime Minister's House which rarely used to be opened, have now been opened for the benefit of the common people. Here, what do we see? The poor and the down trodden are being suppressed every day. It is necessary to change our attitude. Sir, you come from an agriculturist family and from a rural constituency. You know the difficulties of poor people. I request a ruling on the subject allowing for some discussion in this House.

MR. DEPUTY SPEAKER.—The hon. Member Sri V. N. Patil has given notice of an adjournment motion regarding the day-long Dharna by the Vidyarthi Yuvajana Sangha. As I said earlier strike or Dharna are not fit subject matters for adjournment motion. Consent is therfore refused and the notice is disallowed.

Mysore High Court (Amendment) Bill, 1969

(Introduction.)

SRI K. PUTTASWAMY.—On behalf of the Chief Minister. I beg to introduce the Mysore High Court (Amendment) Bill, 1969.

MR. DEPUTY SPEAKER.—The Mysore High Court (Amendment) Bill, 1969, is introduced.

Mysore Beedi Industrial Premises (Regulation of Condition of Work) (Repealing) Bill, 1969, as passed by the Legislative Council

SRI M. NAGAPPA (Raichur).—Sir, I take objection for taking up the Mysore Beedi Industrial Premises (Regulation of Conditions of works) Repealing Bill, 1969, for consideration. My objection is, this should not have been included in the Agenda at all. Rule 175 of the Rules of Procedure says :

> "Notwithstanding that a day has been allotted for other business under rule 163, 164 or 174 a motion or motions for

(SRI M. NAGAPPA)

leave to introduce a Bill or Bills may be made and a Bill or Bills may be introduced on such day before the Assembly enters on the business for which the day has been allotted."

So, only introduction of Bills is permitted, and the Bills cannot be taken up for consideration when financial matters are listed in the List of business. Supplementary Estimates and Additional grants are financial matters. So there is no scope for the consideration of the Bill under rule 175. I request the Chair that we may straightaway take up financial matters which are pending before the House.

Sri K. PUTTASWAMY.—Sir, the report of the Business Advisory Committee was submitted to the House and this House as agreed to it. Any decision taken by this House will override the rules even if there be any point.

Sri M. NAGAPPA.—I do not object to the Bill being taken up. But it can be taken up later. The Hon. Minister should not advise to setup bad precedents. There is no harm if this matter is taken up after the discussion of supplementary estimates.

Mr. DEPUTY SPEAKER.—The Business Advisory Committee report is presented and it is adopted by the House.

Sri K. H. PATIL.—It only allots time and it does not say which Bill should be taken first.

Sri M. NAGAPPA.—I think the Minister for Parliamentary Affairs has not seen the report of the Business Advisory Committee. As per the report, the supplementary estimates come first and the Bills come later whereas in the List of Business this matter is brought first and other matters have been put below. Therefore, the financial matter will have to be taken up first and other matters later. According to the Business Advisory Committee Report, there is no contradiction, and this Bill must come after the financial matter.

Sri K. PUTTASWAMY.—It has become rather very difficult to function in this House. The hon. Member seems to be very ticklish about rules. This rule which he has quoted does not prevent me from requesting the House to take up this Bill for consideration.

Mr. DEPUTY SPEAKER.—There is no prohibition.

Motion to Consider.

Sri K. PUTTASWAMY.—Sir, I beg to move :

" That the Mysore Beedi Industrial Premises (Regulation of conditions of Work) Repealing Bill, 1969 as passed by the Legislative Council be taken into cosideration.

Mr. DEPUTY SPEAKER.—Motion moved—

" That the Mysore Beedi Industrial Premises (Regulation of Conditions of Work) (Repealing) Bill, 1969, as passed by the Legislative Council, be taken into consideration."

Sri K. PUTTASWAMY.—Sir, The Mysore Beedi Industrial premises (Regulation of Conditions of Work) Act, 1964 was passed in 1964 and it came into force on 1-6-67. After this law was enacted, the Parliament passed a Central Act which has similar provisions and that is also in force in the neighbouring States.

The Beedi industry is spread out in all the districts of this State and also several parts of the Southern Indian States. The neighbouring States have been making representation that the provisions of the law governing beedi manufacture must be similar in all states. Otherwise, it would lead to migration of industries. In the border districts of the Mysore State there has been a representation that unless this Central Act is brought into force, there would be migration of industries. Government have considered the provisions of the state Act as well as of the Central Act and as I have already submitted, the provisions are almost similar. Hence it was found desirable to have the Central Act instead of the State Act. The circumstances under which the state Legislature passed the enactment were that there was no Cental Act then. In fact, it is really creditable that this Legislature was the first to take up the regulation of conditions of work of beedi workers in industrial premises and they were able to pass the Mysore Beedi Industrial Premises (Regulation of Conditions of Work) Bill in 1964.

Sri L. SRIKANTAIAH (Nanjangud).—If the Central Act is there, the only thing that remains is its implementation. Where is the need for the State Act ?

Sri K. PUTTASWAMY.—The Central Act was enacted subsequent to the enactment of the State Act. At the Conference of Labour Ministers of States they have been feeling that there must be a uniform Act throughout the Country and the Government of India has been repeatedly writing to us requesting the repeal of the State Act and bringing the Central Act into force.

Sri L. SRIKANTIAH.—If the Central Act is there, it will override the State law.

Sri K. PUTTASWAMY.—The hon. Member is under the impression that both the State Act and the Central Act are in force in the State ; it is not so; it is only the State Act that is in force. After the State Act is repealed, the Central Act will be brought into force.

Sri M. NAGAPPA.—Sir, I want a clarification. Is it necessary that we should adapt the Central Act; if so, why has the Government not brought a Bill for adaptation of the Central Act and repealing the State Act ?

Sri K. PUTTASWAMY.—There is an enabling provision in the Central Act to make it applicable to the States. So, there is no necessity for bringing such a Bill. If we repeal the State Act, thereafter we can bring the Central Act into force.

Sri L. SRIKANTIAH.—Assuming that the subject falls within the concurrent list, under what provision of law does the Hon'ble Minister say that making the Central Act applicable to the State riquires the sanction of the State Legislature ?

Sri K. PUTTASWAMY.— It is in the Central Act itself.

† Sri AZEEZ SAIT.—Sir, it is after many many dreams that the Hon' ble Minister for Labour has borught this repealing Act. It is a very small piece of legislation and it only says that since the Central Act is there, the State Act has to be repealed. This ought to have been done much earlier. I do not know why it was delayed. Was it delayed wantenly ? However, I am sorry to say that although the Bill was passed by the State Legislature and is in force, not a single section of it pertaining to registration or welfare of the workers or the minimum benefits which it sought to give them such as ventilation, water, light, latrine, etc., has been implemented so far. No care whatsoever of the two lakhs of beedi workers has been taken.

Today the Government have come forward for repealing the Mysore Act. Thereafter the Central Act will come into force. I do not know whether the Rules under the Central Act are ready or not. As stated by my friend Sri Nagappa and provisions of the Central Act should have been placed before us so that we would have studied them and compared those provisions with the provisions of the Mysore Act. I am told that there are certain changes made in the definitions in the Central Act and also certain improvements have been made in the Central Act. If those provisions had been brought before the House we would have studied them and passed on our suggestions, through the Government of Mysore, for improvements in those provisions.

There are more than 2 lakhs workers in the beedi industry. These workers are the most backward people ; they are illiterate and they are unorganised. We have in our Labour Department the Commissioner of Labour and a team of officers including Minimum Wage Inspectors, but whenever the workers take their grievances to the Labour Officer they are not attended to. So far not even one case has been referred to the Tribunal. The Conciliation Officer sits in judgement over the question even though his duty is only to discuss the question with the parties and try to solve the problem and if not solved to refer it to the Tribunal. The result is that the beedi workers do not get justice and the management has become the blood suckers of these poor workers with the Government always siding it. What happened in Kerala ? When the Central Act was introduced there the Ganesh beedi and other beedi industries closed down being afraid of the provision of the Central Act

and thousands of workers were thrown out of employment. But the Government of Kerala came to their rescue. The Minister for Labour and the Minister for Co-operation of Kerala sat together and organised Co-operative society of beedi workers in Cannanore. They personally looked to the organisation of this Co-operative society for four weeks and helped to remove all the red tapism in the organisation of the co-operative society. By this they were able to give employment to 16,000 workers.

The proposal of our Government to repeal the Mysore Act and introduce the Central Act has taken the people here by surprise. We do not know what are the provisions of the Central Act. So while giving my consent to this I request the Government to direct the Labour Department to be alert and take positive steps to see that no unemployment is casued and no worker is thrown out of employment and also to see that the minimum wage of Rs. 2-80 fixed is enforced. Even though this minimum wage is fixed, before their very eyes these workers are paid only Rs. 1-25 per thousand beedies and these officers do not question or take steps to enforce the minimum wage. If these officers are not able to discharge their duties properly and if the things are happening in Bangalore before the very eyes of the Government, what should happen outside ? If our officers are not able to function properly, it is better that they make way for better people.

†SRI M. S. KRISHNAN.—Mr. Speaker, Sir, the Hon. Minister for Labour and Parliamentary Affairs has brought this Bill for repealing the Mysore Beedi Industrial Premises (Regulation of Conditions of work) Act, 1964. The first question that arises is whether such a repealing Bill is necessary or not. As was said by several hon. members here, the subject of labour is a concurrent subject and when this subject is in the Concurrent List we have also the right to bring forward our own enactment. It was on that basis that the State Government got the 1964 enactment passed by the State Legislature which is in force now. It was only after the Central Act came into force. The Central Act came into force only on 30th November 1966. So the question is whether we are simply to accept the Central Act or whether we have the right to make any improvments on the Central Act and improve our own Act. We should have taken steps not only to make our Act to be conformity with the Central Act but also to make our Act much better than the Central Act. It would have been still better if the Governmet had brought forward a comprehensive Bill for this purpose.

There are certain provisions in the Central Act which are an improvement on the State Act. There are certain provisions in the state Act which are much better than the Central Act. There are also certain differences between the State Act and the Central Act. For instance, the definition of 'premises' differs from the definition of 'premises' in the Central Act. The definition in the State Act is more comprehensive enough and it has not led to much litigation. The definition in the Central Act is very cumbersome and is likely to lead to

(SRI M. S. KRISHNAN)

all sorts of litigations as we know in the trade union movement. The definition in the State Act is good not only for the workers but also for the employers. As was pointed out by my friend, immediately after the Central Act was passed you found a situation in Kerala that the Ganesh Beedi Factory ran away to Mysore and they installed their own factory here. This was done to escape from the provisions of the Central enactment. They wanted to take advantage of it and that is why they came down here. This could have been avoided if our Government had done the enactment in a better manner. This has not been done.

3-30 P.M.

There are other provisions. As far as the employees are concerned, I find in the Mysore Act the same definition as in the Central Act. There is one provision about the contract labour in the Central Act, but the same does not find a place in the Mysore Act. I should say that these definitions are important in a Beedi industry. As you know, Sir, maximum amount of exploitation is taking place in this industry. The minimum wages are being denied to the workers, without taking any recourse to any provisions of law. It is because of this that this definition is very important. Under the circumstances, I would say that this particular provision should have found a place even earlier, in our own enactment of 1964. If it had been done in the 1964 Act itself, I would have been very happy. It was not done at that time. I would welcome such a provision in respect of functions of the contract labour.

There are other provisions—I do not want to go into detail about them. I would say that the provisions concerning licences, ventilation, etc., are all common; they are not different from the Central Act. But, the most important thing is, has the Government been able to implement any of these things in Mysore even under their own enactment? They have failed to do so. They have utterly and miserably failed with regard to the implementation of this provision. Even very small facility like drinking water is not provided in this industry. Thousands and lakhs of workers of this industry are suffering from diseases, some of which are incurable. Therefore, I would say that it is very necessary to see that it is implemented faithfully. It is therefore the responsibility of the Government to implement this provision, and I must charge the Government for not having done so.

One more provision, which I would like to bring to your notice, and through you, Sir, to the Hon. Minister for Labour, is about the conditions of service of the workmen, *viz.*, leave and other conditions. Leave has been spoken of, but there has not been any improvement between what pertains to in our Act and what pertains to in the Central Act. I would have been very happy if the Hon. Minister for Labour, who himself was a labour leader and

perhaps even now thinks that he is connected with it, had brought forward some of these provisions as per the Central Act, in respect of leave and other conditions of service. There is the Shops and Establishments Act in other States. Beedi industry is not like a shop ; it is an establishment. The shop employees do get some privileges, which the beedi workers do not get. Under the circumstances, this provision could have been made much better, because these workers work without any light and sanitation and even without proper sitting facilities. Naturally, more amount of leave has to be given to them. I would have been happy if the Hon. Minister for Labour had brought forward a comprehensive Bill, more better than even the Central Act. I would also like to point out in this connection that in other States they have been able to bring amendments to these things, particularly in Kerala even in regard to the enforcement of this enactment they have threatended the employers to implement the Act. I would therefore say that this Government must have the guts to implement the provisions as the Kerala Government. I am speaking about Kerala not because my Party is there in power. Of course, the United Front Governments in West Bengal and Kerala have been able to do it in a much better manner. That apart, I would like the Hon. Minister, purely from the humanitarian point of view, to see that if these Government could implement provisions of the Act there, why not the Government here do so ? When the employer closes down the factory throwing thousands of employees to the street, the Government said there : "we are here to help you". Sir, with the little knowledge I have of this industry in those States I can say that it has been thriving much better. The workers are given maximum co-operation there, Government is happy and the workers are also happy. It is in that direction that the Government of Mysore should move. It is only with this view that I have offered my remarks regarding this repealing Act.

Thank you.

†ಶ್ರೀ ಎರ್. ಶ್ರೀಕಂಠಯ್ಯ.—ಸ್ವಾಮಿ, ಈ ಹೊತ್ತಿನ ಪರಿಸ್ಥಿತಿಯಲ್ಲಿ ಬೀಡಿ ಉದ್ಯಮ ಎನ್ನುವುದು ಒಂದು ಬೃಹತ್ ಕೈಗಾರಿಕೆಯಾಗಿ ಪರಿಣಮಿಸಿದೆ. ಆದರೆ ಅಲ್ಲಿನ ಶೋಚನೀಯವಾದ ಅಂಶವೆಂದರೆ 1964ರಲ್ಲಿ ಬೀಡಿ ಕೈಗಾರಿಕೆಗೆ ಅನ್ವಯವಾಗುವಂಥ ಶಾಸನವಾದರೂ ಕೂಡ ಏನಿದೆ, ಆ ಬಗ್ಗೆ ಶ್ರೀಮಾನ್ ಅಜೀಜ್ ಸೇಟ್ ಅವರು ಹೇಳಿದ ವಿಷಯಗಳೆಲ್ಲವನ್ನೂ ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಅಲ್ಲಿನ ಸ್ಥಿತಿಗತಿಗಳು ತುಂಬ ಚಿಂತಾಜನಕವಾಗಿದೆ. ಇತರ ಕೈಗಾರಿಕೆಗಳಲ್ಲಿ ಎಷ್ಟೊಂದು ಸಿಬ್ಬಂದಿಯನ್ನು ಇಟ್ಟು ಅಲ್ಲಿನ ಕೆಲಸಗಾರರಿಗೆ ಸಲ್ಲಬೇಕಾದ ಸೌಲಭ್ಯಗಳು ಸಲ್ಲುವಂತೆ ಎನ್‌ಫೋರ್ಸ್ ಮಾಡತಕ್ಕ ಕಾನೂನಿನ ಸೌಲಭ್ಯವಿದೆ. ಆದರೆ ಬೀಡಿ ಕೆಲಸಗಾರರಿಗೆ ಯಾವ ವಿಧವಾದ ಸೌಲಭ್ಯವನ್ನೂ ಕಲ್ಪಿಸಿಕೊಳ್ಳುವುದಕ್ಕೆ ಎನ್‌ಫೋರ್ಸ್‌ಮೆಂಟ್ ಆಕ್ಟ್ ಇದೆಯೇ ಎಂದು ಕೇಳುತ್ತೇನೆ. ಗುಂಡ್ಲುಪೇಟೆ, ಮೈಸೂರಿನ ಮಂಡಿ ಮೊಹಲ್ಲಾ, ಮಂಗಳೂರಿನ ಸಮೀಪದಲ್ಲಿರುವ ಕೊಳಚೆ ಹಳ್ಳಿಗಳಲ್ಲ ಹೋಗಿ ನೋಡಿದರೆ ಬೀಡಿ ಕೈಗಾರಿಕೆಯಲ್ಲಿ ಬೀಡಿಯನ್ನು ವಾಸ್ತವವಾಗಿ ಸುತ್ತುವವರು ಯಾವ ಪರಿಸ್ಥಿತಿಯಲ್ಲಿದ್ದಾರೆ ಎನ್ನುವ ಅಂಶ ಚೆನ್ನಾಗಿ ಗೊತ್ತಾಗುತ್ತದೆ. ಇದನ್ನು ತಿಳಿದೇ ಬಹುಶಃ ಕೇಂದ್ರ ಸರ್ಕಾರದವರು ಒಂದು ಒಳ್ಳೆಯ ಶಾಸನವನ್ನು ತಂದಿದ್ದಾರೆ ಮತ್ತು ಈಗ ಕೇಂದ್ರ ಶಾಸನವು ರಾಜ್ಯಕ್ಕೆ ಅನ್ವಯವಾಗುವುದಕ್ಕೆ ನಮ್ಮ ಹಳೆಯ ಶಾಸನವನ್ನು ರಿವೀರ್ ಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಇದು ಅನಗತ್ಯ ಎಂದು ನನಗೆ ತೋರುತ್ತದೆ. ಒಂದು

(ಶ್ರೀ ಎರ್. ಶ್ರೀಕಂಠಯ್ಯ)

ವೇಳೆ ಅಗತ್ಯವೆಂದು ಶಾಸನ ಇರಾಖೆಗೆ ಕಂಡು ಬಂದರೆ ಮಾಡಬಹುದು. ಆದರೆ ನಾನು ಒಂದು ಅಂಶವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಬೀಡಿ ಕೈಗಾರಿಕೆಯಾದರೂ ಇತರ ಕೈಗಾರಿಕೆಗಳಂತಲ್ಲ. ಅದು ಒಂದು ವಿಶೇಷವಾದ ಕೈಗಾರಿಕೆ. ಒಂದು ಕಡೆಯಲ್ಲಿ ಬೀಡಿಗಳು ತಯಾರಾಗುವುದಿಲ್ಲ. ಮಂಗಳೂರು ಮತ್ತು ಇತರ ಕಡೆಗಳಲ್ಲಿ ನೋಡಿದರೆ ಒಬ್ಬ ಉದ್ದಿಮೆದಾರನಿರುತ್ತಾನೆ. ಅವನು ಪೀಸ್ ವರ್ಕ್ ಮೇಲೆ ಗ್ರಾಮ ಗ್ರಾಮಾಂತರಗಳಲ್ಲಿರುವ ಜನರಿಗೆ ಬೀಡಿ ಸುತ್ತುವ ಕೆಲಸವನ್ನು ಹಂಚುತ್ತಾನೆ. ಇದರಿಂದ ಏನಾಗುತ್ತದೆ ಎಂದರೆ ಕೇಂದ್ರ ಶಾಸನದಲ್ಲಿ ಎಸ್ಟಾಬ್ಲಿಷ್‌ಮೆಂಟ್ ಆಫ್ ದಿ ಪ್ರಿಮಿಸಸ್ ಎನ್ನುವ ಡೆಫಿನಿಷನ್ ಇದ್ದರೂ ಕೂಡ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಇದು ಬೀಡಿ ಕೆಲಸಗಾರನಿಗೆ ಅನ್ವಯವಾಗುವುದಕ್ಕೆ ಸಾಧ್ಯವಾಗಲಾರದು. ಏಕೆಂದರೆ ಅನೇಕ ವೇಳೆ ಹಳ್ಳಿಗಳಲ್ಲಿ ಕೆಲಸ ಮಾಡುವ ಸಣ್ಣಪುಟ್ಟ ಕೆಲಸಗಾರರು, ಪೀಸ್ ವರ್ಕ್ ಮೇಲೆ ಬೀಡಿ ಕಟ್ಟುವವರು ಇವರೆಲ್ಲ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ತೆಗೆದುಕೊಂಡರೆ ಕೈಗಾರಿಕಾ ಕೆಲಸಗಾರರಿಗೆ ಸೌಲಭ್ಯಗಳನ್ನು ನಮೂದಿಸತಕ್ಕ ಯಾವುದೇ ಶಾಸನದಿಂದ ಸೌಲಭ್ಯ ಸಿಕ್ಕುವುದಕ್ಕೆ ಎಸ್ಟಾಬ್ಲಿಷ್‌ಮೆಂಟ್ ಆಫ್ ದಿ ಪ್ರಿಮಿಸಸ್ ಎನ್ನುವ ಡೆಫಿನಿಷನ್‌ನಿಂದ ಆಗುವುದಿಲ್ಲ. ಕೇಂದ್ರ ಸರ್ಕಾರದವರು 1966ನೇ ಇಸವಿಯಲ್ಲಿ ಈ ಶಾಸನವನ್ನು ಮಾಡಿದಾಗ ಬಹುಶಃ ಅವೇ ದೃಷ್ಟಿಯಿಂದ ಸ್ಥಳೀಯ ಸರ್ಕಾರಗಳಿಗೆ ಸೂಚನೆಯನ್ನು ಕೊಟ್ಟರು. ಬೀಡಿ ಕೈಗಾರಿಕೆ ಪ್ರತಿಯೊಂದು ರಾಜ್ಯದಲ್ಲಿಯೂ ಒಂದೊಂದು ವೈಶಿಷ್ಟ್ಯತೆಯನ್ನು ಪಡೆದಿದೆ. ಬೀಡಿ ಸುತ್ತುವುದು ಕೇರಳದಲ್ಲಿ ಒಂದು ರೀತಿ ನಡೆಯುತ್ತಿದೆ, ಮಂಗಳೂರಿನಲ್ಲಿ ಒಂದು ರೀತಿ ನಡೆಯುತ್ತಿದೆ ಬಂಗಾಳದಲ್ಲಿ ಒಂದು ರೀತಿ ನಡೆಯುತ್ತಿದೆ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಒಂದು ರೀತಿ ನಡೆಯುತ್ತಿದೆ, ಉತ್ತರ ಪ್ರದೇಶದಲ್ಲಿ ಒಂದು ರೀತಿ ನಡೆಯುತ್ತಿದೆ. ಇವತ್ತು ಏನಾಗಿದೆ ಎಂದರೆ ಪೀಸ್‌ವರ್ಕ್ ಮೇಲೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹಂಚುವುದರಿಂದ ಶಾಸನದ ಪ್ರಕಾರ, ಈ ಡೆಫೆನಿಷನ್ ಅನ್ವಯವಾಗುವುದಿಲ್ಲ. ಇದನ್ನು ಬೀಡಿ ಉದ್ಯಮದವರು ದುರುಪಯೋಗಪಡಿಸಿಕೊಂಡು ಶ್ರೀ ಕೃಷ್ಣನ್‌ರವರು ಹೇಳಿದಂತೆ ಅತಿಯಾಗಿ ಕೂಲಿ ಕಾರರನ್ನು ಶೋಷಣೆ ಮಾಡುತ್ತಿದ್ದಾರೆ. ಆದುದರಿಂದ ಸ್ಥಳೀಯ ವಿದ್ಯಮಾನವನ್ನು ತಿಳಿದು ಪ್ರೆಮಿಸಸ್ ಎಂಬುದನ್ನು ಡಿಫೈನ್ ಮಾಡಿದರೆ ಸೆಂಟ್ರಲ್ ಆಕ್ಟ್‌ನ್ನು ಯಾವ ಉದ್ದೇಶದಿಂದ ತಂದಿದ್ದಾರೋ ಅದು ಸಾರ್ಥಕವಾಗುವುದು. ನಮ್ಮ ಸಂಸ್ಥಾನದಲ್ಲಿರುವ ವೈಶಿಷ್ಟ್ಯವನ್ನು ನೋಡಿ ಅದಕ್ಕೆ ತಕ್ಕಂತೆ ಒಂದು ಸಮಗ್ರ ಶಾಸನ ತಂದಿದ್ದರೆ ಚೆನ್ನಾಗಿತ್ತು. ಬರೀ ಕೇಂದ್ರದ ಆಕ್ಟನ್ನು ಅನ್ವಯಿಸುವುದರಿಂದ ನಮ್ಮ ಸಂಸ್ಥಾನದಲ್ಲಿರುವ ಬೀಡಿ ಕೆಲಸಗಾರರಿಗೆ ಸದುಪಯೋಗವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಎಸ್ಟಾಬ್ಲಿಷ್‌ಮೆಂಟ್ ಮತ್ತು ಪ್ರಿಮಿಸಸ್ ಎಂಬ ಪದಗಳನ್ನು ಯಾವ ರೀತಿ ಡಿಫೈನ್ ಮಾಡಿದರೆ ನಮ್ಮ ಸಂಸ್ಥಾನಕ್ಕೆ ಅನುಕೂಲ, ಹೇಗೆ ಮಾಡಿದರೆ ಇಲ್ಲಿ ಬೀಡಿ ಕಟ್ಟುವವರಿಗೆ ಅನುಕೂಲವಾಗುವುದು ಎಂಬುದರ ಬಗ್ಗೆ ನಾನು ಅಷ್ಟು ದೀರ್ಘವಾಗಿ ವ್ಯಾಸಂಗ ಮಾಡಿಲ್ಲ. ಆದುದರಿಂದ ಸ್ಪಷ್ಟವಾಗಿ ಹೇಳಲು ಧೈರ್ಯ ಸಾಲದು. ನಾನು ಅಷ್ಟು ವಿವರವಾಗಿ ವ್ಯಾಸಂಗ ಮಾಡಿಲ್ಲ. ನಾನು ಕೆಲವು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್‌ಗೆ ಸಂಬಂಧಪಟ್ಟ ಕೇಸುಗಳನ್ನು ನೋಡಿ ಹೇಳುತ್ತಿದ್ದೇನೆ. ಗ್ರಾಮಾಂತರಗಳಲ್ಲಿ ಬೀಡಿ ಕೆಲಸಗಾರರಿಗೆ ಲೇಬರ್ ಶಾಸನಗಳು ಬೇಕಾದಷ್ಟಿದ್ದರೂ ತಕ್ಕ ಸೌಲಭ್ಯಗಳು ಸಿಕ್ಕುತ್ತಿಲ್ಲ.

ಇನ್ನೊಂದು ಅಂಶ ಶ್ರೀ ಕೃಷ್ಣನ್‌ರವರು ಹೇಳಿದರು. ರೇಬರ್ ಎಕ್ಸ್‌ಪ್ಲಾಯಿಟ್ ಮಾಡಲು ಇಲ್ಲಿ ಅವಕಾಶವಿದೆ, ದಿನಕ್ಕೆ 8 ಆಣೆ ಕೊಟ್ಟು 500 ಬೀಡಿ ಕಟ್ಟಿಸಿಕೊಳ್ಳುತ್ತಾರೆ. 8 ವರ್ಷ ವಯಸ್ಸಾಗಿರುವ ಸಣ್ಣ ಮಕ್ಕಳನ್ನು ಇಂಗ್ಲೆಂಡಿನಲ್ಲಿ ಶೋಷಣೆ ಮಾಡುತ್ತಿರುವುದನ್ನು ಥಾರಲ್ಸ್ ಡಿಕನ್ಸ್‌ರವರು ಹೇಳಿರುವಂತೆ ಇಲ್ಲೂ ಕೂಡ ಕೂಲಿಗಾರರನ್ನು ಶೋಷಣೆ ಮಾಡುತ್ತಿದ್ದಾರೆ. ಏಳೆಂಟು ವರ್ಷದ ಮಕ್ಕಳನ್ನು ಬೀಡಿ ಕಟ್ಟಲು ಉಪಯೋಗಮಾಡಿಕೊಂಡು ಅವರಿಗೆ ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದಂತೆ ಮಾಡಿ, ಶೋಷಣೆ ಮಾಡಿ ಉದ್ಯಮದಾರರು ಲಾಭ ಸಂಪಾದನೆ ಮಾಡುತ್ತಿದ್ದಾರೆ. ಗಣೇಶ ಬೀಡಿ ವರ್ಕ್ಸ್ ಉದ್ಯಮ ಬಹಳ ದೊಡ್ಡದು. ಕೇರಳಾದಲ್ಲಿ ಬೀಡಿ ಕೆಲಸಗಾರರಿಗೆ ಸಂಬಂಧಪಟ್ಟ ಶಾಸನವನ್ನು ಜಾರಿಗೆ ತಂದಾಗ ಕೇರಳದವರು ಮಂಗಳೂರು, ಮೈಸೂರು, ಮುಂತಾದ ಕಡೆಗಳಿಗೆ ಬಂದು ಅನುಕೂಲ ಪಡೆದರು, ಏಕೆಂದರೆ ಇಲ್ಲಿ ಕೇಂದ್ರದ ಶಾಸನವನ್ನು ಅನ್ವಯಿಸಿರಲಿಲ್ಲ. ಇಂದು ಗಣೇಶ ಬೀಡಿಯವರು ಬೆರ್ಗಾ-ಟಾಟಾ ಸಮಕ್ಕೆ ಬರಬಹುದು, ಅಷ್ಟರಮಟ್ಟಿಗೆ ಅವರು ಲಾಭ ಪಡೆಯುತ್ತಿದ್ದಾರೆ. ಬಡ ಜನರಿಗೆ ಶೋಷಣೆಯಾಗಿರುವುದರಿಂದ ಸ್ಥಳೀಯ ವಿದ್ಯಮಾನವನ್ನರಿತು ಇಲ್ಲ ಬೀಡಿ ಕೆಲಸಗಾರರ ಸ್ಥಿತಿಗತಿಗಳನ್ನು ನೋಡಿ ಸಮಗ್ರ ಶಾಸನವನ್ನು ತಂದರೆ ಬಹಳ ಜನರಿಗೆ ಉಪಯೋಗವಾಗುವುದು. ಶ್ರೀ ಪುಟ್ಟಸ್ವಾಮಿಯವರು ಅನೇಕ ದಿವಸಗಳ ಕಾಲ ಕೆಲಸಗಾರರ ಸೇವೆ ಮಾಡಿದ್ದಾರೆ, ಆದುದರಿಂದ ಅವರ ಇತಿಮಿತಿಗಳು ಅವರಿಗೆ

ಚೆನ್ನಾಗಿ ಗೊತ್ತಿದೆ. ಅವರು ಆಸಕ್ತಿ ವಹಿಸಿ ಬಡ ಕೆಲಸಗಾರರಿಗೆ ಅನುಕೂಲವಾಗುವಂತೆ ಒಂದು ಸಮಗ್ರ ಶಾಸನವನ್ನು ತಂದು ಮೈಸೂರು ಬೀಡಿ ಕೆಲಸಗಾರರಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಾರೆಂಬ ಆಶಾಭಾವನೆಯಿಂದ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—ಮಾನ್ಯ ಉಪಾಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯನ್ನು ತಂದಿರುವ ಉದ್ದೇಶವು ಕ್ಲಾಜು ಎರಡರಿಂದ ಗೊತ್ತಾಗುವುದು. ನಮ್ಮ ರಾಜ್ಯದಲ್ಲಿದ್ದ ಕಾಯಿದೆಯನ್ನು ರಿಪೀಲ್ ಮಾಡಿ ಕೇಂದ್ರ ಸರಕಾರ ಅಥವ ಪಾರ್ಲಿಮೆಂಟ್ ಮಾಡಿದ ಕಾಯಿದೆಯನ್ನು ನಮ್ಮ ರಾಜ್ಯದಲ್ಲಿ ತರ ಬೇಕೆಂದಿದ್ದಾರೆ, ಯಾವ ತಾರೀಖಿನಿಂದ ನಮ್ಮ ರಾಜ್ಯದಲ್ಲಿ ಕೇಂದ್ರದ ಕಾನೂನನ್ನು ಜಾರಿಗೆ ತರ ಬೇಕೆಂದು ರಾಜ್ಯ ಸರಕಾರ ನಿರ್ಣಯ ಮಾಡುವುದೋ ಆ ತಾರೀಖಿನಿಂದ ಮೈಸೂರು ರಾಜ್ಯದಲ್ಲಿ ಈಗಿರುವ ಕಾನೂನು ರಿಪೀಲ್ ಆಗುವುದು. ಆ ತಾರೀಖಿನಿಂದ ಸೆಂಟ್ರಲ್ ಆಕ್ಟ್ ಜಾರಿಗೆ ಬರು ವುದು. ಇಡೀ ಭಾರತಕ್ಕೆ ಅನ್ವಯಿಸುವಂಥ ಒಂದು ಕಾಯಿದೆಯನ್ನು ಕೇಂದ್ರ ಸರಕಾರ ಮಾಡಿದೆ, ಅದನ್ನು ಮೈಸೂರು ರಾಜ್ಯಕ್ಕೂ ಅನ್ವಯಿಸಬೇಕೆಂದು ಕೇಂದ್ರದವರು ಹೇಳಿದ್ದಾರೆ. ಇದು ಸಂತೋಷಪಡತಕ್ಕ ಸಂಗತಿಯಾದರೂ ಕೂಡ ಸರಿಯಾದ ಮಾರ್ಗವಲ್ಲ ಎಂದು ನಾನು ಭಾವಿಸಿದ್ದೇನೆ. ಸರಕಾರ ತೀವ್ರವಾಗಿ ಸೆಂಟ್ರಲ್ ಆಕ್ಟಿನಲ್ಲಿರುವ ಒಳ್ಳೆಯ ಉದ್ದೇಶ ಅಥವ ಕಲಮುಗಳನ್ನು ನಮ್ಮ ಮೈಸೂರು ಆಕ್ಟಿನಲ್ಲಿ ಅಳವಡಿಸಿ ಅದಕ್ಕೆ ತಕ್ಕ ತಿದ್ದುಪಡಿ ಮಾಡಿ ತರಬಹುದಾಗಿತ್ತು, ಆದರೆ ಅಂಥ ಕೆಲಸ ಮಾಡಿಲ್ಲ. ಸರಕಾರ ಇದನ್ನು ಹತ್ತು ವರ್ಷಗಳ ಮೇಲೆ ಜಾರಿಗೆ ತರಬಹುದು, ನಿರ್ದಿಷ್ಟ ವಾದ ಅವಧಿ ಈ ತಿದ್ದುಪಡಿ ಮಸೂದೆಯಲ್ಲಿ ನಮೂದಿಸಿಲ್ಲ. ಸರಕಾರ ನೋಟಿಫೈ ಮಾಡಿದ ನಂತರ ಹೊಸ ಆಕ್ಟ್ ಜಾರಿಗೆ ಬರುವುದು. ಸೆಂಟ್ರಲ್ ಆಕ್ಟ್ ಮತ್ತು ನಮ್ಮ ಆಕ್ಟನ್ನು ಹೋಲಿಕೆಮಾಡಿ, ವಾಸ್ತವವಾಗಿ ಲೋಪದೋಷಗಳು ಏನಾದರೂ ನಮ್ಮ ಆಕ್ಟಿನಲ್ಲಿದ್ದರೆ ಅಥವ ಹೆಚ್ಚಿನ ಸೌಲತ್ತು ಬೀಡಿ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿಗೆ ಕೇಂದ್ರದ ಆಕ್ಟಿನಲ್ಲಿದ್ದರೆ ಅದನ್ನು ತೆಗೆದುಕೊಂಡು ಅದಕ್ಕೆ ತಕ್ಕಂತೆ ನಮ್ಮ ಆಕ್ಟಿನಲ್ಲಿ ತಿದ್ದುಪಡಿ ಮಾಡಿ ನಮ್ಮ ಆಕ್ಟಿನಲ್ಲಿರುವ ಲೋಪವನ್ನು ನಿವಾರಿಸಿ ಸರಿಯಾದ ಬಿಲ್ಲನ್ನು ತರಲು ಅವಕಾಶವಿತ್ತು. ಈಗಾಗಲೆ ಈ ಬಗ್ಗೆ ಕೆಲವರು ಕಟುವಾಗಿ ಟೀಕೆ ಮಾಡಿದ್ದಾರೆ. ಕೇರಳದಲ್ಲಿ ಸೆಂಟ್ರಲ್ ಆಕ್ಟ್ ಜಾರಿಗೆ ಬರುತ್ತಲೇ, ನಮ್ಮಲ್ಲಿರುವ ಕಾಯಿದೆಯ ರಾಭ ಪಡೆಯಬೇಕೆಂದು ಕೆಲವರು ಕೇರಳದಿಂದ ಇಲ್ಲಿಗೆ ಬಂದು ಇಲ್ಲಿ ಬೀಡಿ ಕೈಗಾರಿಕೆಯನ್ನು ಪ್ರಾರಂಭಿಸಿದರು. ಅದಕ್ಕೆ ಅವಕಾಶವಿಲ್ಲದಂತೆ ಸೆಂಟ್ರಲ್ ಆಕ್ಟಿನಲ್ಲಿರುವ ಕೆಲವು ಒಳ್ಳೆಯ ಕಲಮು ಗಳನ್ನು ತೆಗೆದುಕೊಂಡು ಈ ಬೀಡಿ ಉದ್ಯಮದಲ್ಲಿರುವ ಬಡ ನೌಕರರಿಗೆ ತೊಂದರೆಯಾಗದಂತೆ ನಮ್ಮ ಆಕ್ಟನ್ನು ತಿದ್ದುಪಡಿ ಮಾಡಿದ್ದರೆ ಬಹಳ ಉತ್ತಮವಾಗುತ್ತಿತ್ತು. ರಾಜ್ಯ ಸರಕಾರ ಏಕೆ ಹಾಗೆ ಮಾಡಲಿಲ್ಲವೋ ಗೊತ್ತಾಗಲಿಲ್ಲ. ಸರಕಾರ ತನ್ನ ಉದ್ದೇಶವನ್ನು ಬಿಲ್ಲಿನಲ್ಲಿ ತಿಳಿಸಿದೆ. ಕೇಂದ್ರ ಸರಕಾರದ ಕಾನೂನನ್ನು ನಮ್ಮ ರಾಜ್ಯದಲ್ಲೂ ಜಾರಿಗೆ ತರಬೇಕೆಂದು ಕೇಂದ್ರದವರು ತಿಳಿಸಿರುವು ದರಿಂದ ಇಲ್ಲೂ ತರುತ್ತಿರುವುದಾಗಿ ಉದ್ದೇಶದಲ್ಲಿ ತಿಳಿಸಿದ್ದಾರೆ. ಇದಕ್ಕೆ ಬದಲು ಇನ್ನೊಂದು ರಾಜ್ಯದವರು ಇಲ್ಲಿಗೆ ಬಂದು ಬೀಡಿ ಕೈಗಾರಿಕೆ ಪ್ರಾರಂಭಿಸಿದ್ದಾರೆ, ಮುಂದೆ ಹಾಗೆ ಮಾಡದಂತೆ ಇದನ್ನು ತಂದಿದ್ದೇವೆ ಎಂದು ಹೇಳಬಹುದು. ಆದರೆ ಕಾಯಿದೆ ದೃಷ್ಟಿಯಿಂದ ಕೇಂದ್ರದ ಕಾನೂನಿನಲ್ಲಿ ಯಾವ ಯಾವ ಸೆಕ್ಷನ್ ನಮಗೆ ಅನುಕೂಲವಾಗಿದೆ ಎಂದು ನೋಡಿ ನಮ್ಮ ಆಕ್ಟಿನಲ್ಲಿ ಅದನ್ನು ಅಳವಡಿಸಿಕೊಳ್ಳಲು ತಕ್ಕ ತಿದ್ದುಪಡಿ ಮಾಡಿದ್ದರೆ ಸರಿಯಾಗಿರುತ್ತಿತ್ತು. ಈಗಿನ ಮಸೂದೆಯಿಂದ ಯಾವ ಕಾರ್ಯ ಸಾಧನೆಯೂ ಆಗುವುದಿಲ್ಲ. ಈಗಲಾದರೂ ನಾನು ಹೇಳಿದ ಹಾಗೆ ಮಾಡುವುದು ಸೂಕ್ತ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಪಾಯಿಂಟ್ ಆಫ್ ಪ್ರೊಸೀಜರಿನ ವಿಚಾರದಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ಮಂತ್ರಿಗಳು ನಿನ್ನೆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಸಪ್ಲಿಮೆಂಟರಿ ಬಜೆಟ್ ಪಾಸಾದ ಮೇಲೆ ಬೀಡಿ ಕೈಗಾರಿಕೆಗೆ ಸಂಬಂಧಪಟ್ಟ ಬಿಲ್ಲನ್ನು ತರುವುದಾಗಿ ಹೇಳಿದ್ದರು. ಆದರೆ ಈ ದಿನ ಮೊದಲು ಬಿಲ್ಲನ್ನು ತಂದಿದ್ದಾರೆ, ಅದು 2-3 ನಿಮಿಷಗಳಲ್ಲಿ ಮುಗಿಯಬಹುದೆಂದಿದ್ದೆ. ಆದರೆ ಒಂದೂವರೆ ಗಂಟೆ ಈಗಾಗಲೆ ಆಗಿದೆ. ಇಷ್ಟು ಕಾಲ ಈ ಬಿಲ್ಲು ಚರ್ಚೆಯಾಗಿದೆ. ಈ ದೇಶದ ಅರ್ಧ ಬಜೆಟ್ಟಿನಷ್ಟು ಸಪ್ಲಿಮೆಂಟರಿ ಬಜೆಟ್ ಇದೆ. If you want the supplementary budget to be discussed, there is very little time left before us. Therefore, I request the Chair to postpone it for tomorrow. It has to be given full one day for discussion. Almost half-an-hour is over. The time that is before us is not sufficient. Therefore this may be postponed to tomorrow or some other day. The time allotted for the supplementary demand has been already half spent.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈಗ ನಡೆದ ಚರ್ಚೆ ಬಹಳ ಪ್ರಾಮುಖ್ಯವಾದುದು ಎಂಬುದು ಚರ್ಚೆಯಿಂದಲೇ ಗೊತ್ತಾಗುವುದು. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕು, ಯಾವುದಕ್ಕೆ ಕೊಡಬಾರದು ಎಂಬುದನ್ನು ತಿಳಿದುಕೊಳ್ಳಬೇಕೆಂದು ಶ್ರೀ ರಾಜಯ್ಯಶೆಟ್ಟರು ಹೇಳಿದರು. ಬಹುಶಃ ಈ ಮಸೂದೆ ಚರ್ಚೆಯಾದಾಗ ಅವರಿರಲಿಲ್ಲವೆಂದು ಕಾಣುತ್ತದೆ. ಅವರು ನಡೆದ ಚರ್ಚೆಯನ್ನು ಕೇಳಿದ್ದರೆ ಅವರಿಗೇ ಸ್ಪಷ್ಟವಾಗುತ್ತಿತ್ತು. ಈಗ ಚರ್ಚೆ ಆಗತಕ್ಕ ವಿಚಾರ ಬಹಳ ಪ್ರಾಮುಖ್ಯವಾದುದು ಎಂದು ವಿರೋಧಪಕ್ಷದ ನಾಯಕರು ಹೇಳಿದರು ಮತ್ತು ಸ್ವಲ್ಪ ಹೊತ್ತಿನಲ್ಲಿ ಮುಗಿಯುತ್ತದೆ ಎಂದು ಅವರು ಹೇಳಿದರೂ ಇಷ್ಟು ಹೊತ್ತು ಹಿಡಿಯಿತಲ್ಲಾ ಎಂದರೆ ಈ ಸಭೆಯ ಕಾಲ ನನ್ನ ಹತೋಟಿಯಲ್ಲಿ ಇಲ್ಲ, ಅದು ತಮ್ಮ ಹತೋಟಿಯಲ್ಲಿ ಇದೆ. ಸ್ವಲ್ಪ ಮಟ್ಟಿಗೆ ವಿರೋಧಪಕ್ಷದ ನಾಯಕರು ಮನಸ್ಸು ಮಾಡಿದರೆ...

ಶ್ರೀ ಎಸ್. ಶಿವಪ್ಪ.—ನಮಗಯ ಖರ್ಚು ಆದದ್ದಕ್ಕೆ ನನಗೆ ವ್ಯಥೆ ಇಲ್ಲ, ನಪ್ಲಿಮೆಂಟರಿ ಡಿಮಾಂಡ್ಸ್‌ಗೆ ಒಂದು ದಿವಸ ಕೊಡುತ್ತೇನೆ ಎಂದು ಹೇಳಿದ್ದಿರಲ್ಲಾ ಅದಕ್ಕೆ ಏನು ಹೇಳುತ್ತೀರಿ ಅಂತ ಅಷ್ಟೆ.

ಶ್ರೀ ಕೆ. ಪುಟ್ಟಸ್ವಾಮಿ.—ನಪ್ಲಿಮೆಂಟರಿ ಡಿಮ್ಯಾಂಡ್ಸ್‌ಗೆ ಸಾಕಾದಷ್ಟು ಕಾಲ ಕೊಡಬೇಕೆಂದು ಹೇಳುವವನು ನಾನು. ಆತುರ ಆತುರವಾಗಿ ಅದನ್ನು ಈ ಗಳಿಗೆಯಲ್ಲೇ ಮುಗಿಸಬೇಕೆಂದು ನಾನು ಹೇಳುವುದಿಲ್ಲ. ಚರ್ಚೆಯಾಗುವಾಗ ನೋಡೋಣ, ವಿಷಯ ಏನು ಚರ್ಚೆಯಾಗುತ್ತದೆ ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ.

ಇನ್ನು ಮಾನ್ಯ ಸದಸ್ಯರು ಈ ಮಸೂದೆ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಮಾಡಿದರು, ಈ ಕಾನೂನನ್ನು ಜಾರಿಗೆ ಕೊಡುವಾಗ ಸರ್ಕಾರ ಅರೆಮನಸ್ಸಿನಿಂದ ಕೊಟ್ಟಿದೆ ಅಥವಾ ಅದಕ್ಕೆ ಗಮನವೇ ಕೊಟ್ಟಿಲ್ಲ ಎಂದು. ಸ್ವಾಮಿ ಒಂದು ವಿಚಾರ ಒಪ್ಪಿಕೊಳ್ಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಈ ಆಕ್ಟ್‌ನಲ್ಲಿರತಕ್ಕ ಎಲ್ಲಾ ಕಲಂಗಳನ್ನೂ ಜಾರಿಗೆ ಕೊಟ್ಟರೆ ಅದರಿಂದ ಬಹಳ ಪ್ರಮಾದವಾಗುತ್ತದೆ ಎಂಬ ಕಾರಣದಿಂದಲೇ ಕಾನೂನನ್ನು ಜಾರಿಗೆ ತರುವಂತಹ ವೇಳೆಯಲ್ಲಿ ಕೆಲವು ಸೆಕ್ಷನ್‌ಗಳನ್ನು ಜಾರಿಗೆ ತರಲಿಲ್ಲ. ಅದಕ್ಕೆ ಈ ಕಾನೂನಿನ ಒಂದನೇ ಸೆಕ್ಷನ್ 3ನೇ ಸಬ್ ಕ್ಲಾಸ್‌ನಲ್ಲಿ ಅವಕಾಶವಿದೆ.

Sub-section (1) under Section 3, :—

> "It will come into effect on the date as the Government may appoint and a different date may be appointed for different areas for different provisions of this Act."

ಈ ಅಧಿಕಾರವನ್ನು ಪಯೋಗಿಸಿ ಸರ್ಕಾರ 14-16-17ನೇ ಸೆಕ್ಷನ್‌ಗಳನ್ನು ಜಾರಿಗೆ ತರಲಿಲ್ಲ. ಮಾನ್ಯ ಸದಸ್ಯರು ಕೇಳಬಹುದು ನಾವು ಹೇಳುತ್ತಾ ಇರುವುದನ್ನು ನೀವು ಒಪ್ಪಿಕೊಂಡಹಾಗೆ ಆಯಿತಲ್ಲಾ ಎಂದು. ಮೈಸೂರು ರಾಜ್ಯದಲ್ಲಿ ಮತ್ತು ನಮ್ಮ ನೆರೆಯ ರಾಜ್ಯಗಳಲ್ಲಿ ಈ ಬೀಡಿ ಉದ್ಯಮ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ನಾವು ಸ್ವಲ್ಪ ಅರಿತುಕೊಳ್ಳಬೇಕಾಗಿದೆ. ಅದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಇದು ಹೆಚ್ಚು ಹೆಚ್ಚಾಗಿ ಗೃಹ ಕೈಗಾರಿಕೆಯಾಗಿ ನಡೆಯುತ್ತಾ ಇದೆ. ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದ ಹಾಗೆ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಕಡೆಗಳಲ್ಲಿ ಇದನ್ನು ಗೃಹ ಕೈಗಾರಿಕೆಯಾಗಿ ನಡೆಸುತ್ತಾ ಇದ್ದಾರೆ. ಈ ರೀತಿ ನಡೆಸುವುದರಿಂದಲೇ ಈ ಒಂದು ಉದ್ಯಮದ ವಿಚಾರದಲ್ಲಿ ಕಾನೂನನ್ನು ಜಾರಿಗೆ ತರುವಂತಹ ಸಮಯದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ತರಬೇಕಾಗುತ್ತದೆ. ನಮ್ಮ ಕಾನೂನಿನಲ್ಲಿ ಸ್ಪಷ್ಟವಾಗಿ ಇದೆ ಏನೆಂದರೆ, ಬೀಡಿ ಇಂಡಸ್ಟ್ರಿಯಲ್ ಪ್ರಿಮಿಸಿಸ್ ಎಂದರೆ ಯಾವ್ಯಾವ ಮನೆಗಳಲ್ಲಿ ಅವ ಪುರಸೊತ್ತಿನ ಸಮಯದಲ್ಲಿ ಬೀಡಿ ಕಟ್ಟುತ್ತಾರೆಯೋ ಆ ಮನೆಗಳೆಲ್ಲಾ ಇದಕ್ಕೆ ಸಂಬಂಧಪಡುತ್ತದೆ ಎಂಬುದಾಗಿ ತಾವು ಅನೇಕರು ನೋಡಿರಬಹುದು, ವ್ಯಾಪಾರ ಮಾಡುತ್ತಾ ಅಂಗಡಿಯಲ್ಲಿ ಕುಳಿತಿರುತ್ತಾನೆ, ಬೀಡಿ ಕಟ್ಟುವುದು ಕಟ್ಟುತ್ತಾ ಇರುತ್ತಾನೆ. 4 ಜನ ಸೇರಿ ಗೃಹಕೃತ್ಯದ ವಿಚಾರ, ವ್ಯಾಪಾರದ ವಿಚಾರ ಎಲ್ಲಾ ಚರ್ಚೆ ಮಾಡುತ್ತಾ ಇರುತ್ತಾರೆ, ಬೀಡಿ ಕಟ್ಟಿಕೊಂಡು ಹೋಗುತ್ತಾ ಇರುತ್ತಾರೆ. ಅವರ ವಿರಾಮದ ವೇಳೆಯನ್ನು ಈ ರೀತಿ ಉಪಯೋಗಿಸಿಕೊಳ್ಳುತ್ತಾ ಇರುತ್ತಾರೆ ಎಂಬುದು ಗೊತ್ತಾಗುತ್ತದೆ. 2ನೇ ಸೆಕ್ಷನ್ (ಬಿ) ಪ್ರಕಾರ ಏನಾದರು ನಾವು ಕ್ರಮ ತೆಗೆದುಕೊಂಡರೆ ಇದೆಲ್ಲಾ ಇಂಡಸ್ಟ್ರಿಯರ್ ಪ್ರಿಮಿಸಿಸ್ ಆಗುತ್ತದೆ. ಒಂದು ಗುಡಿಸಿಲಿನಲ್ಲ ವಾಸ ಮಾಡುತ್ತಾನೆ, ವ್ಯಾಪಾರ ಮಾಡುತ್ತಾನೆ, ತನ್ನ ಹೊಲ ಗದ್ದೆಗೆ ಹೋಗಿ ಬಂದು ಸಾಯಂಕಾಲ ಚಳಿ ಆದರೆ ಬೆಂಕಿ ಕಾಯಿಸುತ್ತಾ ಬೀಡಿ ಕಟ್ಟುತ್ತಾ ಕುಳಿತಿರುತ್ತಾನೆ.

Sri AZEEZ SAIT.—The Hon. Minister is trying to defend the beedi workers without knowing their problems correctly. If he goes and sees what is actually going on he will come to know the real picture. He says the beedi worker will utilise his leisure time and do this business. It is not the case. He has to work under different persons for wages and he is not doing independently. This is what is actually going on. The benefit that is to be shown to the real worker will not reach him. All the benefits will go to the licensed man who is manufacturing the beedies by the help of these poor workers. Even if the entire Act is implemented, I know what would be the consequences. To-day hundreds and hundreds of beedi workers are lying in the hospital suffering from diseases on account of the unhealthy atmosphere under which they were compelled to work.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರು ಕೊಟ್ಟಂಥ ಸಲಹೆಗೆ ಬಹಳ ಕೃತಜ್ಞ ನಾಗಿದ್ದೇನೆ. ಈ ವಿಷಯದಲ್ಲಿ ಒಂದು ವಿಚಾರ ವಿನಂತಿ ಮಾಡಿಕೊಳ್ಳುವುದಕ್ಕೆ ಅಪೇಕ್ಷಿಪಡುತ್ತೇನೆ. ನಾನು ಯಾವಾಗಲೂ ಯಾವ ವಿಚಾರವನ್ನೇ ಆಗಲಿ ಅದರಲ್ಲೂ ಈ ಸಭೆಯಲ್ಲಿ ಹಗುರವಾಗಿ ನೋಡುವುದಿಲ್ಲ, ಆ ರೀತಿ ನಾನು ಬೆಳೆದುಬಂದಿಲ್ಲ, ನನಗೆ ತಿಳಿದುದನ್ನು ಹೇಳುತ್ತಾ ಇದ್ದೇನೆ. ಮಾನ್ಯ ಸದಸ್ಯರಿಗೆ ಅದು ಅಪ್ಯಾಯಮಾನವಾಗದಿದ್ದರೆ ಅಥವಾ ಅವರ ಅಭಿಪ್ರಾಯದಲ್ಲಿ ನಾನು ಹೇಳುವುದು ತಪ್ಪು ಅಂತ ಅವರು ತಿಳಿದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನನ್ನ ಶಕ್ತ್ಯಾನುಸಾರವಾಗಿ ಮಾತ್ರ ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ, ಅದಕ್ಕಿಂತ ಹೆಚ್ಚಿಗೆ ಏನೂ ಮಾಡರಾರೆ.

ಸ್ವಾಮಿ, ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಾ ಇದ್ದೆ, ಈ ಬೀಡಿ ಉದ್ಯಮ ಒಂದು ರೀತಿಯಲ್ಲಿ ನಡೆದುಕೊಂಡು ಬಂದಿದೆ ಎಂಬುದನ್ನು. ನಮ್ಮ ಮೈಸೂರು ರಾಜ್ಯದಲ್ಲಿ ಮಾಡಿದಂತಹ ಒಂದು ಕಾನೂನನ್ನು ಸಂಪೂರ್ಣವಾಗಿ ಚಾಚೂ ತಪ್ಪದೆ ಅಕ್ಷರಶಃ ಜಾರಿಗೆ ಕೊಟ್ಟಿದ್ದಿದ್ದರೆ ಅಭಾಸವಾಗುತ್ತಿತ್ತು ಎಂದು ನನಗೆ ಅನಿಸುತ್ತದೆ. ಆ ಕಾರಣದಿಂದಲೇ ಈ ಕಾನೂನನ್ನು ಜಾರಿಗೆ ಕೊಡುವಂತಹ ವೇಳೆಯಲ್ಲಿ, 14ನೇ ಸೆಕ್ಷನ್ ಕೆಲಸಗಾರರಿಗೆ ಸಂಬಂಧಪಡುತ್ತದೆ, 16ನೇ ಸೆಕ್ಷನ್ ಪ್ರೊಟೆಕ್ಷನ್ ಫ್ರಂ ಫೈರ್ ಅದಕ್ಕೆ ಸಂಬಂಧಪಡುತ್ತದೆ, 17ನೇ ಸೆಕ್ಷನ್ ಕ್ಯಾಂಟೀನಿಗೆ ಸಂಬಂಧಪಡುತ್ತದೆ ಎಂದು ತಿಳಿದುಕೊಂಡು ಇದನ್ನು ಯಾವುದನ್ನೂ ಜಾರಿಗೆ ಕೊಟ್ಟಿಲ್ಲ. ನನಗೆ ಗೊತ್ತಿದೆ, ಪ್ರತಿಯೊಂದನ್ನೂ ಮಾಡಬೇಕು ಅಂತ ಅಲ್ಲ. ಕೆಲವು ಕಡೆ ಫ್ಯಾಕ್ಟರಿ ಬೇಸಿಸ್‌ನಲ್ಲಿ ನಡೆಯುತ್ತದೆ, ಕೆಲವು ಕಡೆ ಗೃಹ ಕೈಗಾರಿಕೆಯಾಗಿ ನಡೆಯುತ್ತಾ ಇದೆ. ಫ್ಯಾಕ್ಟರಿ ಬೇಸಿಸ್‌ನಲ್ಲಿ ನಡೆದಂತಹ ಸಂದರ್ಭದಲ್ಲಿ ಅದನ್ನು ಅವರು ಆ ರೀತಿಯಾಗಿ ಭಾವಿಸಿದೆ ಗೃಹ ಕೈಗಾರಿಕೆಯು ಬೇಸಿಸ್‌ನಲ್ಲಿ ನಡೆಸುತ್ತಾ ಇದ್ದಾರೆ. ಆ ಕಾರಣದಿಂದ ನಮ್ಮಲ್ಲಿರತಕ್ಕ ಡೆಫಿನಿಷನ್ ಪ್ರಕಾರ ಎಂಪ್ಲಾಯರ್ ಅನ್ನುವ ಡೆಫಿನಿಷನ್ ಏನಿದೆ ಎಂದರೆ ಯಾರು ಟ್ರೇಡ್ ಮಾರ್ಕ್ ಇಟ್ಟುಕೊಂಡು ಮ್ಯಾನುಫ್ಯಾಕ್ಚರರ್ ಆಗಿದ್ದಾರೆಯೋ ಅವನು ಮ್ಯಾನುಫ್ಯಾಕ್ಚರರು ಮತ್ತು ಎಂಪ್ಲಾಯರು. ಮತ್ತು ಹಳ್ಳಿಯಲ್ಲಿ ಒಂದು ಮನೆಯಲ್ಲಿ ಬೀಡಿ ಕಟ್ಟುತ್ತಿದ್ದರೂ ಕೂಡ ಅವನೂ ಸಹ ಎಂಪ್ಲಾಯರ್ ಆಗುತ್ತಾ ಇದ್ದ. ಇದು ಬೀಡಿ ಮಾಡತಕ್ಕ ಉದ್ಯಮದ ದೃಷ್ಟಿಯಿಂದ ಎಷ್ಟು ಅನುಕೂಲವಾಗುತ್ತದೆ ಎಂಬ ಭಾವನೆ ಇತ್ತೋ ಅಷ್ಟು ಅನುಕೂಲವಾಗಲು ಸಾಧ್ಯವಾಗುತ್ತಾ ಇಲ್ಲ.

ಅದಲ್ಲದೆ ಇದು ಒಂದು ಬಹಳ ಸೂಕ್ಷ್ಮವಾದಂಥ ಶಾಸನ. ಸ್ವಲ್ಪ ಹೆಚ್ಚುಕಡಮೆಯಾದರೆ ಈ ಗೃಹ ಕೈಗಾರಿಕೆ ಸ್ಥಳಾಂತರವಾಗುವುದಕ್ಕೆ ಅವಕಾಶ ಉಂಟಾಗುತ್ತದೆ. ಕೇರಳದಲ್ಲಿ ಈ ಹಿಂದೆ ಕೇಂದ್ರದ ಸೆಂಟ್ರಲ್ ಬೀಡಿ ಅಂಡ್ ಸಿಗಾರ್ ವರ್ಕರ್ಸ್ ಅಂಡ್ ಕಂಡೀಷನ್ ಆಫ್ ಎಂಪ್ಲಾಯ್‌ಮೆಂಟ್ ಆಕ್ಟ್‌ನ್ನು ಜಾರಿಗೆ ತಂದಾಗ ಆ ಕೇರಳದಲ್ಲಿದ್ದ ಬೀಡಿ ಕೆಲಸಗಾರರೆಲ್ಲಾ ಮುಂಗಳೂರಿನಲ್ಲಿರತಕ್ಕ ಗಣೇಶ ಬೀಡಿ ಫ್ಯಾಕ್ಟರಿಗೆ ಸ್ಥಳಾಂತರವಾದರು. ಶ್ರೀಮಾನ್ ಕೃಷ್ಣನ್‌ರವರೋ ಅಥವಾ ಬೇರೆ ಯಾರೋ ಒಬ್ಬರು ಸದಸ್ಯರು ಬಹಳ ಔದಾರ್ಯರಹಿತವಾದಂಥ ಒಂದು ಟೀಕೆಯನ್ನು ಮಾಡಿದರು. ಕೇಂದ್ರದ ಮಂತ್ರಿಗಳು ಇಲ್ಲಿಗೆ ಬಂದಿದ್ದಾಗ ನಾವು ಅವರೊಂದಿಗೆ ಸಹಕರಿಸಲಿಲ್ಲ ಎಂದು ಟೀಕೆ ಮಾಡಿದ್ದಾರೆ. ನಾವು ಅವರನ್ನು ಇಲ್ಲಿ ಸತ್ಕರಿಸುವುದಕ್ಕೆ ಸಿದ್ಧವಾಗಿದ್ದೆವು. ಆದರೆ ಅವರು ನೇರವಾಗಿ ಕೊಡಗಿಗೆ ಹೋದರು. ಅಲ್ಲಿ ನಮ್ಮ ಸರ್ಕಾರಿ ಅತಿಥಿ ಗೃಹದಲ್ಲೇ ಉಳಿದಿದ್ದರು. ಅಲ್ಲ ಅವರು

(ಶ್ರೀ ಕೆ. ಪುಟ್ಟಸ್ವಾಮಿ)

ಆ ಕಮ್ಯುನಿಸ್ಟ್ ಲೀಡರ್ ಗೋಪಾಲನ್‌ರವರೊಡನೆ ಚರ್ಚೆ ಮಾಡಿದ್ದಾರೆ. ಅಷ್ಟೇ ಅಲ್ಲದೆ ಆಲ್ಲಿಯ ಅನೇಕ ಪ್ರೊಫೆಸ್ಸರ್‌ಗಳನ್ನೂ ಕರೆಸಿಕೊಂಡು ಅವರೊಂದಿಗೆ ಚರ್ಚೆ ಮಾಡಿದ್ದಾರೆ. ನಮ್ಮಲ್ಲೂ ಕೂಡ ಚರ್ಚೆಮಾಡಿದ್ದಾರೆ. ಕಡೆಯಲ್ಲಿ ಅವರು ನಮ್ಮಲ್ಲಿ ಚರ್ಚೆಮಾಡಿದ್ದು ಸಫಲವಾಯಿತು ಎಂದು ಹೇಳಿದ್ದಾರೆ.

4-00 P.M.

ಶ್ರೀ ಎಲ್. ಶ್ರೀಕಂಠಯ್ಯ.—ನಮ್ಮ ಸರ್ಕಾರದವರು ಯಾವಾಗ ಆಕ್ಕಪಕ್ಕದ ರಾಜ್ಯಗಳೊಂದಿಗೆ ಒಂದು ಏಕಮುಖನಾದ ಶಾಸನವನ್ನು ತರಲಲ್ಲವೋ...

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ನನ್ನಿಂದ ವಿಷಯಗಳನ್ನು ಸಂಗ್ರಹಿಸುವುದಕ್ಕಾಗಿ ಇಂಥ ಪ್ರಶ್ನೆಗಳನ್ನು ಕೇಳುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಕೇಂದ್ರದವರು ತಂದಿರತಕ್ಕ ಆಕ್ಟ್‌ಗೂ ನಮ್ಮ ಆಕ್ಟ್‌ಗೂ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ. ನಾವು ಇಲ್ಲಿ ಒಂದು ಆಕ್ಟನ್ನು ಮೊದಲೇ ಜಾರಿಗೆ ತಂದ ಕಾರಣ ಇದು ಇಲ್ಲಿ ಒಂದು ದೊಡ್ಡ ಗೃಹಕೈಗಾರಿಕೆಯಾಗಿ ಬೆಳೆಯುವುದಕ್ಕೆ ಅವಕಾಶವಾಯಿತು. ಆದರೆ ನಮ್ಮ ಪಕ್ಕದ ರಾಜ್ಯವಾದ ಕೇರಳದವರಿಗೆ ನಮ್ಮ ಹಾಗೆ ಇದನ್ನು ಗೃಹ ಕೈಗಾರಿಕೆಯನ್ನಾಗಿ ಮಾಡುವುದಕ್ಕೆ ಇಷ್ಟವಿಲ್ಲ. ಅವರು ಇದನ್ನೊಂದು ದೊಡ್ಡ ಫಾಕ್ಟರಿಯ ಮಾದರಿಯಲ್ಲಿ ಮಾಡಬೇಕೆಂಬ ಆಸೆ ಅವರದು. ಅದಕ್ಕೆ ಹೆಚ್ಚು ಹಣಬೇಕು. ಇನ್ನೂ ಇತರೇ ಸೌಕರ್ಯಗಳು ಬೇಕು. ಈ ಒಂದು ವಿಷಯದಲ್ಲಿ ಅಲ್ಲಿಯ ಆ ಉದ್ಯಮಗಳ ಮಾಲೀಕರಿಗೂ ಕಾರ್ಮಿಕರಿಗೂ ಮತ್ತು ವರ್ತಕರಿಗೂ ಭಿನ್ನಾಭಿಪ್ರಾಯಗಳಿರುತ್ತವೆ. ಹೀಗೆ ನಾವು ಒಂದೊಂದು ಕಡೆ ಒಂದೊಂದು ರೀತಿಯ ಶಾಸನಗಳನ್ನು ಮಾಡಿದರೆ ಆ ಕಾರ್ಮಿಕರು ಒಂದುಕಡೆಯಿಂದ ಇನ್ನೊಂದು ಕಡೆಗೆ ಬೇಗ ಸ್ಥಳಾಂತರವಾಗುತ್ತಾರೆ. ಆಗ ಈ ಕೈಗಾರಿಕೆ ಬೆಳೆಯುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಈ ಹಿಂದೆ ಕೇಂದ್ರ ಕಾರ್ಮಿಕ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗನ್ನು ಕರೆಯಲಾಗಿತ್ತು. ಅದಕ್ಕೆ ನಾಲ್ಕು ರಾಜ್ಯಗಳ ಮಂತ್ರಿಗಳನ್ನೂ ಕರೆಯಲಾಗಿತ್ತು. ಅಲ್ಲ ನಡೆದ ಚರ್ಚೆಯಲ್ಲಿ ಮುಖ್ಯವಾಗಿ ಹೊರಪಟ್ಟ ವಿಷಯ ಏನೆಂದರೆ ಎಲ್ಲಾ ರಾಜ್ಯಗಳಲ್ಲೂ ಒಂದು ಏಕಮುಖನಾದ ಶಾಸನವಿಲ್ಲದೆ ಹೋದರೆ ಈ ಕೈಗಾರಿಕೆ ಬೆಳೆಯುವುದಕ್ಕೆ ಅವಕಾಶವಾಗುವುಲ್ಲ, ಇದು ಒಂದುಕಡೆಯಿಂದ ಇನ್ನೊಂದು ಕಡೆಗೆ ಸ್ಥಳಾಂತರವಾಗುವುದಕ್ಕೆ ಅವಕಾಶವಾಗುತ್ತದೆ ಎಂಬುದು. ನಮ್ಮ ರಾಜ್ಯದಲ್ಲಿರತಕ್ಕ ಮಿನಿಮಂ ವೇಜಿಸ್ ಏನಿದೆ ಅದಕ್ಕಿಂತ ಬಳ್ಳಾರಿಯಲ್ಲಿರುವುದು ಸ್ವಲ್ಪ ಕಡಮೆ ಇದೆ. ಅಷ್ಟೇ ಅಲ್ಲ ಅಲ್ಲಿರುವ ಮಿನಿಮಂ ವೇಜಿಸ್‌ಗಿಂತ ಆಂಧ್ರದಲ್ಲಿರತಕ್ಕ ಮಿನಿಮಂ ವೇಜಸ್ ಇನ್ನು ಕಡಮೆ ಇದೆ. ಹಾಗಿಲ್ಲವಾದರೆ ಅಲ್ಲಿರತಕ್ಕ ವರ್ಕರುಗಳು ಆಂಧ್ರಕ್ಕೆ ಸ್ಥಳಾಂತರವಾಗುವುದಕ್ಕೆ ಅವಕಾಶವಾಗುತ್ತಿತ್ತು.

ಶ್ರೀ ಅಜೀಜ್ ಸೇಟ್.—ಹಾಗೆ ಆಗುವುದಿಲ್ಲ. ಆಂಧ್ರದಲ್ಲಿ ತಯಾರಿಕತಕ್ಕ ಬೀಡಿಗಳು ಬಹಳ ಇನ್‌ಫೀರಿಯರ್ ಕ್ವಾಲಟಿ. ಅದುದರಿಂದ ಹಾಗೆ ಸ್ಥಳಾಂತರವಾಗುವುದಕ್ಕೆ ಅವಕಾಶವಿಲ್ಲ. ಆ ಮಾಲೂ ಕೂಡ ಇಲ್ಲಿಗೆ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಅದ್ದರಿಂದಲೇ ನಾವೀದಿವಸವವರೆಗೂ ಆ ಬಳ್ಳಾರಿಯಲ್ಲಿರತಕ್ಕ ವರ್ಕರುಗಳಿಗೆ ಮಿನಿಮಂ ವೇಜಸನ್ನು ನಿಗದಿಮಾಡಿಲ್ಲ. ಆದರೆ ಇತ್ತೀಚೆಗೆ ದಕ್ಷಿಣಭಾರತದ ನಾಲ್ಕು ರಾಜ್ಯಗಳವರೂ ಒಂದು ಕಡೆ ಸೇರಿ ಒಂದು ಯೂನಿಫಾರಂ ಶಾಸನವನ್ನು ಮಾಡಿ ಈ ವರ್ಕರುಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗತಕ್ಕದ್ದನ್ನು ತಡೆಗಟ್ಟಬೇಕೆಂದು ತೀರ್ಮಾನ ಮಾಡಿರುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ವೇಜಸ್ ಎಷ್ಟು ಕಡಮೆ ಇದ್ದರೆ ಈ ಕೈಗಾರಿಕೆಗೆ ಅಷ್ಟೂ ಒಳಿಯದು ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಮಾನ್ಯ ಸಚಿವರು ಮಾತನಾಡುತ್ತಿದ್ದ ಹಾಗೆ ಕಾಣುತ್ತಿದೆ. ಆದರೆ ಅದು ಸರಿಯಲ್ಲ. ಎಲ್ಲ ರಾಜ್ಯಗಳಿಗಿಂತಲೂ ನಮ್ಮ ಮೈಸೂರು ರಾಜ್ಯದಲ್ಲಿ ಈ ಮಿನಿಮಂ ವೇಜಸ್ ಬಹಳ ಕಡಮೆ ಇದೆ. ದಕ್ಷಿಣದಭಾರತದ ಕೆಲವು ರಾಜ್ಯಗಳಲ್ಲಿ ಮಿನಿಮಮ್ ಹಾಸ್ಪಿ ವೇಜಸ್ ಇದೆ. ಆದ್ದರಿಂದ ಮಿನಿಮಂ ವೇಜಸ್ ಕಡಮೆ ಇದ್ದರೆ ಅನುಕೂಲವಾಗುತ್ತದೆ ಎನ್ನುವುದು ಸರಿಯಲ್ಲ. ಕೇರಳದ ವರ್ಕರುಗಳು ಮಂಗಳೂರಿನ ಗಣೇಶ ಬೀಡಿ ಗಡಂಗಿಗೆ ಬಂದರೆ ಕೇರಳದವರು ಅಮ್ಮ ಕಡಮೆ ವೇಜಸ್ ಇಟ್ಟುಕೊಂಡು ಲಾಭವನ್ನು ಹೇಗೆ ಮಾಡುತ್ತಾರೆ ?

ಶ್ರೀ ಕೆ. ಪುಟ್ಟಸ್ವಾಮಿ.—ನಮ್ಮ ಮಿನಿಮಂ ವೇಜಸ್ ಮತ್ತು ನಮ್ಮ ಅಕ್ಕಪಕ್ಕದಲ್ಲಿರುವ ರಾಜ್ಯಗಳಲ್ಲಿರತಕ್ಕ ಮಿನಿಮಂ ವೇಜಸ್ ಎರಡಾ ನ್ವಲ್ಪ ಹೆಚ್ಚು ಕಡಮೆ ಒಂದೇ ಇರುತ್ತವೆ. ಆದರೆ ಆಂಧ್ರದಲ್ಲಿರತಕ್ಕ ಮಿನಿಮಂ ವೇಜಸ್ ಇಲ್ಲಿಗಿಂತಲೂ ಬಹಳ ಕಡಮೆ ಇದೆ. ಈ ಎರಡಾ ವಿಷಯುಗಳೂ ಚರ್ಚೆಯಾಗಿ ಆ ನಾಲ್ಕು ರಾಜ್ಯಗಳ ಸಮ್ಮೇಳನದಲ್ಲಿ ಎಲ್ಲವೂ ತೀರ್ಮಾನವಾಗಿದೆ. ಮತ್ತು ನಾಲ್ಕೂ ರಾಜ್ಯಗಳ ಕಾರ್ಮಿಕ ಮಂತ್ರಿಗಳ ಒಂದು ಸಬ್‌ಕಮಿಟಿಯನ್ನು ಕೂಡ ಮಾಡಲಾಗಿದೆ. ಆ ಸಮ್ಮೇಳನದ ಉದ್ದೇಶ ನಾಲ್ಕೂ ರಾಜ್ಯಗಳಲ್ಲೂ ಈ ಕೈಗಾರಿಕೆಯ ಬಗ್ಗೆ ಒಂದೇ ತರಹದ ನೀತಿಯಿರಬೇಕು ಎನ್ನುವುದು. ಇವುಗಳ ಬಗ್ಗೆ ಕೆಲವರು ದೊಡ್ಡ ಕೈಗಾರಿಕೆಗಳಿಗೆ ಇವು ಗಳನ್ನು ಪರಿವರ್ತನೆ ಮಾಡಬೇಕೆಂಬ ಅಭಿಪ್ರಾಯ ಪಟ್ಟಾಗ ಅದರಿಂದ ಜನರಿಗೂ ತೊಂದರೆ ಮತ್ತು ಕೈಗಾರಿಕೆಗೂ ತೊಂದರೆ ಆಗಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಅದನ್ನು ಕೈಬಿಡ ಲಾಯಿತು. ಅಂತೂ ಎಲ್ಲ ರಾಜ್ಯಗಳಲ್ಲೂ ಒಂದು ಕನಿಷ್ಠ ವೇತನದ ಕಟ್ಟುಪಾಡನ್ನು ಜಾರಿಗೆ ತರ ಬೇಕೆಂದು ತೀರ್ಮಾನವಾಗಿದೆ. ಆದಕಾರಣ ನಾವು ಈ ದಿವಸ ಈ ಕೇಂದ್ರದ ಶಾಸನವನ್ನು ಇಲ್ಲಿಗೆ ಅಳವಡಿಸಿಕೊಂಡರೆ ಅದರಿಂದ ನಮಗೇನೂ ಲುಕ್ಸಾನಾಗುವುದಿಲ್ಲ. ಹಾಗೂ ನಮ್ಮ ರಾಜ್ಯದ ಬೀಡಿ ಕೈಗಾರಿಕೆಯಲ್ಲಿ ತೊಡಗಿರತಕ್ಕ ವರ್ಕರುಗಳು ನೆರೆ ರಾಜ್ಯಗಳಿಗೆ ಹೋಗುವುದಕ್ಕೆ ಅವಕಾಶವೂ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಹಿಂದೆ ನಮ್ಮ ಸರ್ಕಾರದವರು ಈ ಸೆಕ್ಷನ್ 14, 16, ಮತ್ತು 17ನ್ನು ಜಾರಿಗೆ ಕೊಟ್ಟರೆ ತೊಂದರೆಯಾಗುತ್ತದೆಂದು ಅವುಗಳನ್ನು ತಡೆಹಿಡಿದಿದ್ದರು. ಈಗ ಕೇಂದ್ರದ ಶಾಸನವನ್ನು ಅಳವಡಿಸಿಕೊಂಡರೆ ಆಗ ತೊಂದರೆ ಬರುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಆ ಕೇಂದ್ರದ ಶಾಸನವನ್ನು ಓದಿದ್ದರೆ ಈ ಪ್ರಶ್ನೆ ಗಳನ್ನೇ ಕೇಳುತ್ತಿರಲಿಲ್ಲ. ಅಲ್ಲದೆ ನಾವೂ ಸಹ ಮಾನ್ಯ ಸದಸ್ಯರಿಗೆ ಆ ಕೇಂದ್ರದ ಆಕ್ಟ್‌ನ್ನು ಒದಗಿಸಿಕೊಟ್ಟಿಲ್ಲ. ಆ ಆಕ್ಟಿನಲ್ಲಿ ಎಸ್ಟಾ್ಯಬ್ಲಿಷ್‌ಮೆಂಟ್ ಎನ್ನುವುದಕ್ಕೆ ಏನು ಹೇಳಿದ್ದಾರೆಂದರೆ :

> "*G. Establishment* : "In relation to contract labour, the principal employer ;
>
> "In relation to the other labour, person who has the ultimate control over the affairs of any establishment or by reason of his advancing money, supplying goods or otherwise substantial interest in the control of the affairs of any establishment and includes any other person to whom the affairs of the establishment are entrusted, whether such person is called managing agent or manager or superintendent or by any other name."

ಆದರೆ ಇದರಲ್ಲಿ ಒಂದು ಪ್ರಮುಖವಾದ ಬದಲಾವಣೆ ಏನೆಂದರೆ—ನಮ್ಮ ಸ್ಟೇಟ್ ಆಕ್ಟಿನಲ್ಲಿ ಈ ಕೈಗಾರಿಕೆ ಒಂದು ಗೃಹಕೈಗಾರಿಕೆಯಾಗಿ ಬೆಳೆಯುವುದಕ್ಕೆ ಅವಕಾಶವಿದೆ. ಇದು ಆ ಕೇಂದ್ರದ ಆಕ್ಟಿನಲ್ಲಿ ಇಲ್ಲ. ಇದೇ ಒಂದು ವ್ಯತ್ಯಾಸ. ಇನ್ನು ನಮ್ಮ ರಾಜ್ಯದ ಆಕ್ಟಿನಲ್ಲಿ ಒಂದು ಪಣ್ಣ ಕೊಂದರೆಯೂ ಇದೆ.....

[MR. SPEAKER in the Chair]

Sri AZEEZ SAIT.—I rise to a point of order. The Hon. Minister in charge of this Bill must only give facts and figures to this House. He must know what he says goes to the people, to the 2½ crores of people. The whole question here is that the members have given consent to the repeal of the State Act and the implementation of the Central Act. Why is the Hon. Minister postponing to adopt the Central Act which is helpful to the poor beedi workers ? He is misguiding and misleading us.

Mr. SPEAKER.—There is no force in the point of order.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದಂಥ ಶ್ರೀ ಅಜೀಜ್ ಸೇಟ್ ಅವರು ಹೆಚ್ಚು ಮಾಹಿತಿಯನ್ನು ಇಟ್ಟುಕೊಂಡಿದ್ದಾರೆ. ನಾನು ನನಗೆ ಯಾವುದು ದೊರಕಿದೆಯೋ ಅಷ್ಟು ಮಾತ್ರ ಹೇಳುತ್ತೇನೆ.

According to Section 2 (g) of the State Act, 'employer' means :

(i) a proprietor or a registered user of a trade mark registered under the Trade and Merchandise Act, 1958 (Central Act 43 of 1958), in relation to beedi, and

(ii) any other person to whom the affairs of any beedi industrial premises are entrusted (whether such other person is called a managing agent, manager, superintendent, or by any other name) ;

ಇದರಿಂದ ಪ್ರೊಪ್ರೈಟರ್ ಅವರಮೇಲೆ ಕಂಟ್ರೋಲ್ ಇಟ್ಟುಕೊಂಡಿರುತ್ತಾನೆಂದು ಆಗುತ್ತದೆ. ಬರೀ ಬೀಡಿ ಕೊಂಡುಕೊಳ್ಳುವವರಿಗೆ ಈ ಕಾನೂನು ಮಾಡುವುದಕ್ಕೆ ಅಡ್ಡಿ ಇಲ್ಲ. ಅದನ್ನು ಇಂಪ್ಲಿಮೆಂಟ್ ಮಾಡಿದರೆ ಬೀಡಿ ಉದ್ಯಮ ಉಳಿದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಅಜೀಜ್ ಸೇಟ್.—2 ಲಕ್ಷ ಜನರು ಈ ಉದ್ಯೋಗವನ್ನು ಮಾಡುತ್ತಿದ್ದಾರೆ. ಅವರ ಭವಿಷ್ಯ ನೋಡುವುದು ಮುಖ್ಯ.

Sri K. PUTTASWAMY.—I am not yielding. I do not want to be disturbed.

ಇನ್ನೊಂದು ಪ್ರಾಮುಖ್ಯವಾದ ವ್ಯತ್ಯಾಸವಿದೆ. ನಮ್ಮ ಸ್ಟೇಟ್ ಆಕ್ಟ್ ಪ್ರಕಾರ The State Government is empowered to grant exemption to the Dwelling Houses where beedi manufacture is carried on. ಈ ರೀತಿಯಾಗಿ ನಾವು ಕೊಡದೇ ಹೋದರೆ ಎಲ್ಲಾ ಡ್ವೆಲಿಂಗ್ ಹೌಸನ್ ಕೂಡ ಬೀಡಿ ಕಟ್ಟುತಕ್ಕ ಹೌಸನ್ ಎಂದು ಪ್ರಾವಿಶನ್ ಮಾಡಬೇಕಾಗುತ್ತದೆ. ಆಗ ಈ ಕೈಗಾರಿಕೆಯಲ್ಲಿ ಕೆಲಸಮಾಡುತ್ತಿರುವ ಪ್ರತಿಯೊಬ್ಬರೂ ಅರ್ಜಿ ಹಾಕಿ ವಿನಾಯಿತಿ ತೆಗೆದುಕೊಳ್ಳಬೇಕು. ಸೆಂಟ್ರಲ್ ಆಕ್ಟ್‌ನಲ್ಲಿ ಈ ರೀತಿ ಇದೆ :

In the Central Act, exemption is provided to the dwelling houses.

Sri L. SREEKANTAIAH.—The Act says :

"It shall come into force on such date as the Government may, by notification, appoint; and different dates may be appointed for different areas and different provisions of this Act."

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ಉತ್ತರ ಮುಗಿದಿದೆ. ಆದರೆ ಮಾನ್ಯ ಶ್ರೀ ಶ್ರೀಕಂಠಯ್ಯ ನವರು ಒಂದು ವಿಚಾರವನ್ನು ಹೇಳಿದರು ಈಗಿರತಕ್ಕ ಕಾನೂನುಗಳಿಗೆ ಅಥವಾ ಸೆಂಟ್ರಲ್ ಆಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದರೆ ಚೆನ್ನಾಗಿತ್ತೆಂದು. ಸೆಂಟ್ರಲ್ ಆಕ್ಟ್ ಪ್ರಕಾರ ಅಲ್ಲಿ ಕ್ಲೀನ್ಲಿನೆಸ್‌ಗೆ ಪ್ರಾವಿಷನ್ ಇಲ್ಲ, ವೆಂಟಿಲೇಷನ್ನಿಗೆ ಅವಕಾಶವಿದೆ. ಡ್ರೈಂಕಿಂಗ್ ವಾಟರ್‌ಗೆ ಅವಕಾಶವಿದೆ. ರ್ಯಾಟರಿನ್ಸ್‌ಗೆ ಮತ್ತು ಯೂರಿನಲ್ಸ್‌ಗೆ ಅವಕಾಶವಿದೆ. ಒವರ್ ಕ್ರೌಡಿಂಗ್ ಕೂಡದು ಎಂದು ಇದೆ. ಸೆಂಟ್ರಲ್ ಆಕ್ಟ್‌ನಲ್ಲಿ ಎಲ್ಲದಕ್ಕೂ ಅವಕಾಶವಿದೆ. ಸೆಂಟ್ರಲ್ ಆಕ್ಟ್‌ಗಿಂತಲೂ ಒಂದು ಗುಂಜಿ ನಮ್ಮ ಆಕ್ಟ್ ಮೇಲು ಎಂದು ನನ್ನ ಭಾವನೆ. ಆದರೂ ಕೂಡ 4 ರಾಜ್ಯಗಳಲ್ಲಿ ಸಮನಾಗಿ ಕಾನೂನುಗಳು ಇರುವುದು ಒಳ್ಳೆಯದು. ಕಾನೂನುಗಳಲ್ಲಿ ವ್ಯತ್ಯಾಸವಿದ್ದರೆ ಒಂದು ಕಡೆಯಿಂದ ಒಂದು ಕಡೆಗೆ ಈ ಉದ್ಯಮ ಸ್ಥಳಾಂತರವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾವು ನೆರೆಹೊರೆಯ ರಾಜ್ಯಗಳವರ ಜೊತೆಯಲ್ಲಿ ವಿಶ್ವಾಸಪೂರ್ವಕವಾದ ರೀತಿಯಲ್ಲಿ ವರ್ತಿಸದೇ ಹೋದರೆ, ಅವರೂ ಕೂಡ ಬೇರೆ ಕಾನೂನುಗಳನ್ನು ಮಾಡಿ ನಮ್ಮಿಂದ ಈ ಉದ್ಯಮ

ಬೇರೆ ಕಡೆಗೆ ಹೋಗುವ ಅವಕಾಶ ಬರುತ್ತದೆ. ನೆರೆಹೊರೆಯ ರಾಜ್ಯಗಳಲ್ಲಿಯೂ ಎರ್ನಾ ಕಡೆಯಲ್ಲಿರುವ ಹಾಗೆ ಈ ಉದ್ಯಮ ಬೆಳೆಯಬೇಕು. ಈ ಉದ್ಯಮದಲ್ಲಿ ಕೊಡಗಿರತಕ್ಕ ಕಾರ್ಮಿಕರ ಹಿತರಕ್ಷಣೆ ಸರ್ಕಾರ ಮಾಡಬೇಕು. ಅದಕ್ಕೆ ಅನುಗುಣವಾದ ಕಾನೂನನ್ನು ಮಾಡುವುದು ಮುಖ್ಯವೆಂದು ತಿಳಿದು ನಮ್ಮ ಕಾನೂನನ್ನು ರಿಪೀಲ್ ಮಾಡಿ ಈಗ ಸೆಂಟ್ರಲ್ ಕಾನೂನನ್ನು ಜಾರಿಗೆ ತರುವುದು ಅವಶ್ಯಕವೆಂದು ನಾನು ಹೇಳಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಶ್ರೀ ಶ್ರೀಕಂಠಯ್ಯ ನವರು ಹೇಳಿದಹಾಗೆ ನಮ್ಮ ಕಾನೂನುಗಳನ್ನು ಸೆಂಟ್ರಲ್ ಆಕ್ಟ್‌ನಂತೆ ಜಾರಿಗೆ ತರುವುದಕ್ಕೆ ಅವಕಾಶ ಮಾಡಬೇಕಾಗಿತ್ತು. ಸೆಕ್ಷನ್ (1) ಮತ್ತು (3)ರಲ್ಲಿ ಹೇಳಿರುವ ಪ್ರಾವಿಷನ್ ಪ್ರಕಾರ ಈ ಕಾನೂನು ಈ ಮನೆಯಲ್ಲಿ ಒಪ್ಪಿಗೆಯಾದಮೇಲೆ ಈ ಕಾನೂನು ರಿಪೀಲ್ ಆಗುವ ಜೊತೆಯಲ್ಲಿ ಸೆಂಟ್ರಲ್ ಆಕ್ಟನ್ನು ಜಾರಿಗೆ ತರುವುದಕ್ಕೆ ವ್ಯವಸ್ಥೆಮಾಡುತ್ತೇನೆ. ಆದರೆ ಮಾನ್ಯ ಶ್ರೀ ಅಜೀಜ್ ಸೇಟ್ ಅವರು ಇದು ಬಹಳ ಸಿಧಾನವಾಗಿದೆಯೆಂದು ಹೇಳಿದರು. ನಮ್ಮ ಕಾನೂನು 6-1-67ರಲ್ಲಿ ಜಾರಿಗೆ ಬಂತು. ಈ ಮಧ್ಯೆ ನಮಗೂ ಮತ್ತು ಇಂಡಿಯಾ ಸರ್ಕಾರಕ್ಕೂ ಪತ್ರವ್ಯವಹಾರ ನಡೆದು ನಮ್ಮ ಕಾನೂನು ಇಟ್ಟುಕೊಳ್ಳಬೇಡ ಆ ಕಾನೂನು ಜಾರಿಗೆ ತರುತ್ತೇವೆನ್ನುವುದರಲ್ಲಿ ಭಿನ್ನಾಭಿಪ್ರಾಯವಿತ್ತು. ಆ ವಿಷಯದಲ್ಲಿ ಆಂಧ್ರದವರು, ಕೇರಳದವರು, ಮದ್ರಾಸಿನವರು ಅಲ್ಲನ ಕಾನೂನುಗಳನ್ನು ಜಾರಿಗೆ ತರಬೇಕೆಂದು ಆಗಲೇ ತೀರ್ಮಾನಮಾಡಿದ್ದರು. ಅದೇ ರೀತಿಯಾಗಿ ಸೆಂಟ್ರಲ್ ಆಕ್ಟನ್ನು ಜಾರಿಗೆ ತರಬೇಕೆಂದು ನಾವೂ ಮಾಡಿದ್ದೆವು. ಈ ವರ್ಷದ ಬಡ್ಜೆಟ್ ಅಧಿವೇಶನದಲ್ಲಿ ಈ ವಿಧಾನಪರಿಷತ್ತಿನಲ್ಲಿ ಈ ಮನೂದೆಯನ್ನು ಮಂಡಿಸಿದಮೇಲೆ ಅದರ ಒಪ್ಪಿಗೆಯೂ ಅದಕ್ಕೆ ದೊರೆಯಿತು. ಅದಕ್ಕೆ ಕಾಲಾವಕಾಶ ಸಾಕಷ್ಟು ದೊರೆಯದೇ ಇದ್ದುದರಿಂದ ಈಗ ಅದನ್ನು ಇಲ್ಲಿ ತರಬೇಕಾಯಿತು. ಅದ್ದರಿಂದ ಕಾಲವಿಳಂಬವಾಗಲಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. S. KRISHNAN.—The Hon. Member Srikantaiah enquired about Sections 14, 16 and 17 which are in the original Act. Will they come into force? Are they included already? Would they come into force now because they are part of the Central Act? He stated that the Hon. Member has not read the Central Act. Unfortunately, the position is Sections 14, 16, 17 of the State Act are analogous to Sections 14, 15, 16 and 17 of the Central Act. The same clauses are here in the State Act. Section 17 of the State Act corresponding to Section 16 of the Central Act speaks of Canteens. When the same provisions are there, to say that the State Act is more beneficial than the Central Act, is a misleading statement.

Sri AZEEZ SAIT.—My friend the Hon. Minister for Labour stated that the Central Act is meant only for the Southern States. The Central Act is meant for the whole of India. Perhaps my friend did not know it. We have bigger industries in Madhya Pradesh. There 8 crores of beedis are rolled per day; in Jubbalpur also 8 crores of beedis are rolled per day. Another industry in North India rolls 15 crores per day. The total population of beedi workers is 12 lakhs.

ಶ್ರೀ ಕೆ. ಪುಟ್ಟಸ್ವಾಮಿ.—ಈ ಸೆಂಟ್ರಲ್ ಕಾನೂನು ನಾಲ್ಕು ರಾಜ್ಯಗಳಿಗೆ ಸೀಮಿತವಾಗಿದೆ ಎಂದು ನಾನು ಹೇಳಿಲ್ಲ. ಇದು ಎಲ್ಲಾ ಕಡೆಗಳಲ್ಲೂ ಇದೆ. ಆದರೆ ಕೇಂದ್ರದ ಕಾನೂನು ನಾಲ್ಕು ರಾಜ್ಯಗಳಿಗೆ ಸೀಮಿತವಾಗಿಲ್ಲ. ಇಂಡಿಯಾ ದೇಶದ ಎಲ್ಲಾ ಕಡೆಗಳಲ್ಲೂ ಇದೆ. ಮೈಸೂರು ರಾಜ್ಯದಲ್ಲಿ ಅಥವಾ ದಕ್ಷಿಣ ಭಾರತದ ರಾಜ್ಯಗಳಲ್ಲಿ ಇದು ಎಷ್ಟು ಬೆಳೆದಿದೆಯೋ, ಅದಕ್ಕಿಂತಲೂ ಹೆಚ್ಚಾಗಿ ಬೆಳೆದಿರತಕ್ಕ ರಾಜ್ಯಗಳು ಕೂಡ ಇವೆ. ನಮ್ಮ ಸಮಸ್ಯೆಯು ಈ ನಾಲ್ಕು ರಾಜ್ಯಗಳ ಸಮಸ್ಯೆಗೆ ಸಂಬಂಧಪಟ್ಟದ್ದು. ನಾಲ್ಕು ರಾಜ್ಯಗಳಲ್ಲೂ ಒಂದೇ ಮಟ್ಟದ ವ್ಯವಸ್ಥೆಯನ್ನು ಮಾಡ ಬೇಕೆಂಬ ಪ್ರಯತ್ನ ನಡೆದಿದೆ. ಮಾನ್ಯ ಕೃಷ್ಣನ್, ಕೇಳಿದ್ದಕ್ಕೆ ನಾನು ಹೇಳುವುದೇನೆಂದರೆ, ಅದನ್ನು

(ಶ್ರೀ ಕೆ. ಪುಟ್ಟಸ್ವಾಮಿ)

ಜಾರಿಗೆ ತರುವಾಗ ಅದನ್ನು ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ. ಸೆಕ್ಷನ್ 1 ಮತ್ತು 3 ರಲ್ಲಿ ಕೆಲವು ಪ್ರೊವಿಜನ್ಸ್ ಮಾತ್ರ ಜಾರಿಗೆ ತರುವುದಕ್ಕೆ ಅವಕಾಶ ಇದೆ.

"It shall come into force in the State on such date as the State Government may by notification in the Official Gazette appoint and different dates may be appointed by the State Government for different areas and for different provisions of the Act".

ಇದನ್ನು ಜಾರಿಗೆ ತರುವ ವೇಳೆಯಲ್ಲಿ ಅದನ್ನು ಅಲೋಚನೆ ಮಾಡುತ್ತೇವೆ.

Mr. SPEAKER.—The question is :

"That the Mysore Beedi Industrial Premises (Regulation of Conditions of Works) (Repealing) Bill, 1969, as passed by the Legislative Council be taken into consideration."

The motion was adopted.

CLAUSES

Mr. SPEAKER.—There are no amendmen's, I shall put the clauses to the vote of the House.

The question is :

"That clause 2 do stand part of the Bill."

The motion was adopted.

Clause 2 was added to the Bill.

Mr. SPEAKER.—The question is :

"That clause 1, the long title and enacting formula do stand part of the Bill."

The motion was adopted.

Clause 1, the long title and the enacting Formula were added to the Bill.

Motion to pass

Sri K. PUTTASWAMY.—I move :

"That the Mysore Beedi Industrial Premises (Regulation of Conditions of Works) [Repealing] Bill, 1969, as passed by the Legislative Council, be passed."

Mr. SPEAKER.—The question is :

"That the Mysore Beedi Industrial Premises (Regulation of Conditions of Works) Repealing Bill, 1969, as passed by the Legislative Council be passed."

The motion was adopted.

Mr. SPEAKER.—Next item is Financial Business.